## ಹೀಗಿರಲಿ ಬಿಂದಿ...

ಉದ್ದ ಮುಖ ಇರುವವರು ಚಿಕ್ಕ ಸ್ಟೋನ್ ಸ್ಟಿಕ್ಕರ್ ಇಟ್ಟರೆ ಅಂದ ಇಮ್ಮಡಿಗೊಳ್ಳುತ್ತದೆ. ದುಂಡು ಮುಖ ಇರುವವರಿಗೆ ಮೊಟ್ಟೆಯಾಕಾರದ ಅಥವಾ ದುಂಡನೆ ಸ್ಟಿಕ್ಕರ್ ಹೆಚ್ಚು ಹೊಂದುತ್ತದೆ. ಹೃದಯಾಕಾರದ ಮುಖದವರಿಗೆ ಚಿಕ್ಕ ಬಿಂದಿ, ಉದ್ದ ಅಥವಾ ನಾಮದಂತಹ ಬೊಟ್ಟು ಹಾಗೂ ಡಿಸೈನರ್ ಸ್ಟಿಕ್ಕರ್‌ಗಳು ಹೆಚ್ಚು ಹೊಂದುತ್ತವೆ. ಮೊಟ್ಟೆಯಾಕಾರದ ಮುಖ ಉಳ್ಳವರಿಗೆ ದೊಡ್ಡ ಬೊಟ್ಟು ಹೆಚ್ಚು ಚೆನ್ನ. ಶ್ಯಾಮಲ ವರ್ಣದವರು ಗಾಢ ಬಣ್ಣದ, ಮರೂನ್, ಬಿಳಿ ಬಣ್ಣದ ಹಾಗೂ ಶೈನಿ ಸ್ಟಿಕ್ಕರ್, ರೇಡಿಯಂ ಸ್ಟಿಕ್ಕರ್ ಇಟ್ಟರೆ ಚೆನ್ನ.

ಬೆಳ್ಳಗಿರುವವರು ಕಲರ್‌ಫುಲ್ ಸ್ಟಿಕ್ಕರ್, ಆಯಾ ಉಡುಪಿಗೆ ತಕ್ಕಂತೆ ಮ್ಯಾಚಿಂಗ್ ಬಿಂದಿಗಳನ್ನು ಇಡಬಹುದು. ಕೆಂಪು ಬಣ್ಣದ ಬಿಂದಿಗೆ ಬಿಳಿ ಬಣ್ಣದ ಕಾಂಬಿನೇಷನ್ ಹೆಚ್ಚು ಒಪ್ಪುತ್ತದೆ. ಮಧ್ಯಕ್ಕೆ ಕಡುಗೆಂಪು ಸ್ಟಿಕ್ಕರ್ ಹಾಗೂ ಸುತ್ತಲೂ ಬಿಳಿ ಬಣ್ಣದ ಚುಕ್ಕೆಗಳನ್ನಿಟ್ಟರೆ ಮುಖದ ಅಂದ ಇಮ್ಮಡಿಗೊಳ್ಳುತ್ತದೆ. ಸೀರೆಯಂತಹ ಸಾಂಪ್ರದಾಯಿಕ ದಿರಿಸಿನೊಂದಿಗೆ ಇದನ್ನು ಬಳಸಬಹುದು ಎನ್ನುವ ವಿವರಣೆ ಲತಾ ರವೀಶ್ ಅವರದ್ದು.

**-ಲತಾ ರವೀಶ್** ಬಿಂದಿ ವಿನ್ಯಾಸಕಿ






ಸೌಂದರ್ಯವೂ ಇಮ್ಮಡಿಯಾಗುತ್ತದೆ. ಇದೇ ಮಾದರಿಯ ಸ್ಟಿಕ್ಕರ್‌ಗಳೂ ಮಾರುಕಟ್ಟೆಯಲ್ಲಿ ಲಭ್ಯ ಇವೆ. ಕಡುಗೆಂಪು, ಸುತ್ತಲೂ ಕಪ್ಪು ಬಣ್ಣದ ಗೆರೆ ಇರುವ ಉದ್ದನೆ, ದುಂಡನೆ, ಮೊಟ್ಟೆಯಾಕಾರದ ಸ್ಟಿಕ್ಕರ್‌ಗಳು ಮಹಿಳೆಯರನ್ನು ಆಕರ್ಷಿಸಿವೆ.

## ಹರಳು, ಕುಂದನ್ ನಂಟು

‘ಹಿಂದೆ ಪುಡಿ ಕುಂಕುಮವನ್ನು ಹಣೆಗೆ ಇಟ್ಟುಕೊಳ್ಳಲಾಗುತ್ತಿತ್ತು. ಇದು ಮುತ್ತೈದೆಯ ಸೂಚಕವಾಗಿಯೂ ಬಳಸಲಾಗುತ್ತಿತ್ತು. ಈ ಜಾಗದಲ್ಲಿ ಈಗ ವೈವಿಧ್ಯಮಯ ಸ್ಟಿಕ್ಕರ್‌ಗಳು ರೂಪು ತಳೆದಿವೆ. ಫ್ಯಾಷನ್ ಜಗತ್ತಿನ ಓಘಕ್ಕೆ ತಕ್ಕಂತೆ ನಿತ್ಯ ಹೊಸತನಕ್ಕೆ ತೆರೆದುಕೊಳ್ಳುತ್ತ ವನಿತೆಯರ ಅಂದ ಹೆಚ್ಚಿಸುತ್ತಿರುವ ಬಿಂದಿಗಳು ತಮ್ಮ ಪ್ರಭಾವಳಿಯನ್ನೂ ಇಮ್ಮಡಿಗೊಳಿಸಿಕೊಂಡಿವೆ. ಕೆಂಪು, ಕಪ್ಪು, ನೀಲಿ, ಬಿಳಿ, ಹಳದಿ ಹೀಗೆ ವಿವಿಧ ಬಣ್ಣದ ಸ್ಟಿಕ್ಕರ್‌ಗಳು ಫ್ಯಾಷನ್‌ಪ್ರಿಯರನ್ನು ಬರಸೆಳೆದಿವೆ. ಡ್ರೆಸ್ ಮ್ಯಾಚಿಂಗ್ ಸ್ಟಿಕ್ಕರ್ ಇಟ್ಟುಕೊಳ್ಳುವುದು ಈಗಿನ ಟ್ರೆಂಡ್. ವೆಲ್ವೆಟ್, ರೇಡಿಯಂ, ತ್ರೀಡಿ (ಒಂದೇ ಸ್ಟಿಕ್ಕರ್‌ನಲ್ಲಿ ಮೂರು ಬಣ್ಣ), ಗ್ಲಾಸೀ ಸ್ಟಿಕ್ಕರ್ ಫ್ಯಾಷನ್‌ಪ್ರಿಯರ ಮನಕದ್ದಿವೆ’ ಎನ್ನುವುದು ಹಾಸನದ ಬ್ಯೂಟೀಷಿಯನ್ ಲತಾ ರವೀಶ್ ಅವರ ಅಭಿಮತ.

ಸ್ಟಿಕ್ಕರ್‌ಗಳಿಗೆ ಹರಳು, ಮುತ್ತು, ಕುಂದನ್‌ಗಳ ನಂಟು ಢಾಳವಾಗಿಯೇ ಇದೆ. ಇವು ಸ್ಟಿಕ್ಕರ್‌ಗಳ ಅಂದ ಹೆಚ್ಚಿಸುತ್ತದೆ. ವಿವಾಹ ಸಮಾರಂಭ, ಹಬ್ಬ, ಕಿಟ್ಟಿಪಾರ್ಟಿ, ಕಚೇರಿಯಲ್ಲಿ ಸಣ್ಣ ಸಮಾರಂಭ, ನಿಶ್ಚಿತಾರ್ಥ, ನಾಮಕರಣ ಹೀಗೆ ವಿವಿಧ ಸಮಾರಂಭಗಳಿಗೆ ಸ್ಟಿಕ್ಕರ್‌ಗಳ ನಂಟು ಬೆಳೆಸುತ್ತಾರೆ ಫ್ಯಾಷನ್‌ಪ್ರಿಯರು. ಇವು ಮುಖಕ್ಕೆ ದೇಸೀತನದ ಲುಕ್ ನೀಡುವ ಜತೆಗೆ, ಅಂದವನ್ನೂ ಇಮ್ಮಡಿಗೊಳಿಸುತ್ತವೆ. ಆಭರಣ, ಉಡುಪಿಗೆ ಹೊಂದುವಂತಹ ಸ್ಟಿಕ್ಕರ್ ಹಚ್ಚಿಕೊಳ್ಳುವುದೂ ಈಗಿನ ಟ್ರೆಂಡ್.



## ಹಣೆಯ ಮಧ್ಯಕ್ಕೆ ಬಂತು ಕುಂಕುಮ

ಸಂಪ್ರದಾಯದಂತೆ ಎರಡು ಹುಬ್ಬುಗಳ ನಡುವೆ ಕುಂಕುಮ ಇಡುವುದು ಪದ್ಧತಿ. ಆದರೆ ಈಗದು ಹಣೆಯ ಮಧ್ಯ ಭಾಗಕ್ಕೆ ಬಂದು ಕುಳಿತಿದೆ. ಕೆಲವರು ನಡುಹಣೆಯಲ್ಲಿ ಕುಂಕುಮ ಅಥವಾ ಸ್ಟಿಕ್ಕರ್ ಇರಿಸಿಕೊಳ್ಳುತ್ತಾರೆ. ಅದು ಹೊಸ ಟ್ರೆಂಡ್ ಸೃಷ್ಟಿಸಿದೆ. ಇನ್ನು ಕೆಲವರು ಹುಬ್ಬುಗಳ ನಡುವೆ ಒಂದು ಬೊಟ್ಟು, ನಡುಹಣೆಯಲ್ಲಿ ಪುಡಿ ಕುಂಕುಮ ಹಚ್ಚಿಕೊಳ್ಳುತ್ತಾರೆ. ಅವರಿಷ್ಟಕ್ಕೆ, ಅವರವರ ಭಾವಕ್ಕೆ ತಕ್ಕಂತೆ ಕುಂಕುಮ ಹಣೆಯನ್ನು ಅಲಂಕರಿಸುತ್ತದೆ. ಇನ್ನು ಕೆಲ ಸಮುದಾಯಗಳಲ್ಲಿ ಬೈತಲೆ ಮಧ್ಯೆ ಕುಂಕುಮ ಇಟ್ಟುಕೊಳ್ಳುವ ಪದ್ಧತಿ ರೂಢಿಗತವಾಗಿದೆ. ಇದು ಸಹ ಅನೇಕ ಮಹಿಳೆಯರನ್ನು ಆಕರ್ಷಿಸಿದೆ. ಕೆಲವರು ಹುಬ್ಬುಗಳ ನಡುವೆ ಸ್ಟಿಕ್ಕರ್ ಇಟ್ಟು ಬೈತಲೆ ಕೆಳಗೆ ಕುಂಕುಮ ಇಟ್ಟುಕೊಳ್ಳುತ್ತಾರೆ. ಅದೀಗ ಟ್ರೆಂಡ್ ಆಗಿದೆ. ■